**<u>ದಿನಾಂಕಃ 23.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರ</u>ತಿವಾದಿ ಪರ ವಕೀಲರಿಂದಃ**

ನಾನು 5 ನೇ ತರಗತಿಯ ವರಗೂ ವಿದ್ಯಾಭ್ಯಾಸ ಮಾಡಿರುತ್ತೇನೆ ಹಾಗೂ ಸಹಿಯನ್ನು ಕನ್ನಡದಲ್ಲೆ ಮಾಡುತ್ತೇನೆ. ನನ್ನ ವಿರುದ್ದ ರಾಜಣ್ಣ ರವರು ಪ್ರಕರಣವನ್ನು ಹೂಡಿರುತ್ತಾರೆ. ನಾನು ಸಲ್ಲಿಸಿದ ದಾಖಲೆಗಳನ್ನು ನೋಡಿರುತ್ತೇನೆ.

ದಾವಾಸ್ವತ್ತು ಮೂಲತಃ ದೊಡ್ಡಬೈರಪ್ಪ ನವರ ಸ್ವತ್ತಾಗಿರುತ್ತದೆ. ಅವರು ನನ್ನ ತಾತ. ನನ್ನ ತಂದೆಯವರು ಮೊದಲೆ ತೀರಿಕೊಂಡಿರುತ್ತಾರೆ, ಹಾಗಾಗಿ ನನ್ನ ತಾತನ ಮರಣದ ನಂತರ ನನ್ನ ತಾಯಿಯ ಹೆಸರಿಗೆ ಖಾತೆಯನ್ನು ಮಾಡಿಸಿ ನಂತರ ನನ್ನ ಹೆಸರಿಗೆ ಮಾಡಿಸಿಕೊಂಡಿಸಿರುತ್ತೇನೆ. ನಾವು ಒಟ್ಟು 3 ಜನ ಮಕ್ಕಳು. ಅದರಲ್ಲಿ ಒಬ್ಬರು ತೀರಿಕೊಂಡಿರುತ್ತಾರೆ. ದಾವಾಸ್ವತ್ತು ನಮ್ಮ ಕುಟುಂಬದಲ್ಲಿ ವಿಭಾಗವಾಗಿರುವುದಿಲ್ಲ. ನನ್ನ ತಾಯಿ ನಂತರ ನನ್ನ ಅಣ್ಣನ ಹೆಸರಿನಲ್ಲಿ ಖಾತೆಯನ್ನು ಮಾಡಿಸಿ ಅವರು ತೀರಿಕೊಂಡ ನಂತರ ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ, ಯಾವುದೇ ವಿಭಾಗವಾಗಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**.

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**